ಸಾರಿಗೆ ಖಾಯಂ ಬದಲಾವಣೆ

3295 (380); ಶ್ರೀ ಪಾಟೀಲ್ ಜೆ.ಟಿ.

ಅ) ಹಿಮಾಚಲ ಪ್ರದೇಶ ರಾಜ್ಯದಲ್ಲಿ ಇರುವಂತೆ ಮೋಟಾರು ವಾಹನಗಳನ್ನು ನೋಂದಾಯಿಸುವ ಮೊದಲು ಆ ವಾಹನಕ್ಕೆ ಪಾರ್ಕಿಂಗ್ ಜಾಗ ಇರುವ ಬಗ್ಗೆ ಸಂಪೂರ್ಣ ದಾಖಲೆಗಳನ್ನು ಕೊಟ್ಟಾಗ ಮಾತ್ರ ನೊಂದಾಯಿಸಲಾಗುವುದೇ; ಈ ಮಾದರಿಯ ಬಗ್ಗೆ ಸರ್ಕಾರವು ಏನಾದರೂ ಕ್ರಮ ಕೈಗೊಳ್ಳುವಂತೆ ರಾಜ್ಯದಲ್ಲೂ ಸಾರಿಗೆ ನಿಯಮ ಬದಲಾಯಿಸುವ ವಿಚಾರ ಸರ್ಕಾರಕ್ಕೆ ಇದೆಯೇ (ವಿವರ ಒದಗಿಸುವುದು)?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ಮೋಟಾರು ವಾಹನ ಕಾಯ್ದೆ 1988 ಮತ್ತು ಅದರಡಿ ರಚಿತವಾದ ನಿಯಮಗಳನ್ನು ರಾಜ್ಯದಲ್ಲಿ ಪಾಲಿಸಲಾಗುತ್ತಿದೆ.

ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ

3296 (1068); ಶ್ರೀ ರಾಘವೇಂದ್ರ ಬಿ.ವೈ (ಶಿಕಾರಿಪುರ)

ಅ) ಬಂಜಾರ ಸಮುದಾಯದ ಅಭಿವೃದ್ಧಿಗೆ ಕರ್ನಾಟಕ ತಾಂಡ ಅಭಿವೃದ್ಧಿ ನಿಗಮವನ್ನು ಯಾವಾಗ ಸ್ಥಾಪನೆ ಮಾಡಲಾಗಿದೆ;

ಆ) ಸರ್ಕಾರವು ನಿಗಮ ಪ್ರಾರಂಭವಾದ ಸಾಲಿನಿಂದ 2015–16ನೇ ಸಾಲಿನ ಜೂನ್ ವರೆಗೆ ಬಂಜಾರು ಸಮುದಾಯದ ಅಭಿವೃದ್ಧಿಗಾಗಿ ಬಜೆಟ್‌ನಲ್ಲಿ ಮೀಸಲಿರಿಸಿರುವ, ಬಿಡುಗಡೆ ಮಾಡಿದ ಹಾಗೂ ಖರ್ಚು ಮಾಡಿದ ಹಣವೆಷ್ಟು (ವಾರ್ಷಿಕವಾರು ಮಾಹಿತಿ ನೀಡುವುದು)?